ಶ್ರೀ ವಾಟಾಳ್ ನಾಗರಾಜ್.—ರಾಜ್ಯ ಸಭೆಯ ಮುಂದೆ ಇಟ್ಟಿರತಕ್ಕ ಆ ವರದಿಯನ್ನು ತರಿಸುವುದಕ್ಕೆ ಹೇಳಿದ್ದಿರಿ. ಅದು ಇನ್ನೂ ಬಂದಿಲ್ಲ. ಅದು ಈಗ ಪಬ್ಲಿಕ್ ಡಾಕ್ಯುಮೆಂಟ್ ಆಗಿದೆ.

ಅಧ್ಯಕ್ಷರು.—ಪಾರ್ಲಿಮೆಂಟ್ ಮುಂದೆ ಅದನ್ನು ಮಂಡಿಸಿರುವುದರಿಂದ ಅದು ಒಂದು ಪಬ್ಲಿಕ್ ಡಾಕ್ಯುಮೆಂಟ್. ಅದನ್ನು ಯಾರು ಬೇಕಾದರೂ ತರಿಸಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್.—ಅದು ಸಾರ್ವಜನಿಕ ಸ್ವತ್ತು. ಅದೇನೂ ಗುಪ್ತವಾದ ಡಾಕ್ಯುಮೆಂಟ್ ಅಲ್ಲ. ಈ ದೇಶದ ಉಪಪ್ರಧಾನಿಯವರ ಹೇಳಿಕೆಯ ಒಳಗಡೆ ರಾಜಕೀಯ ಇರಬಹುದು. ಜನತಾ ದಳದಲ್ಲಿ ಈಗ ಎರಡು ವರ್ಗವಾಗಿದೆ ಅದು ಎರಡು ಭಾಗವಾಗತಕ್ಕ ಸೂಚನೆ ಇಡೀ ದೇಶದಲ್ಲಿ ನಡೆದಿದೆ. ಪ್ರಧಾನಿಯವರದ್ದು ಒಂದು ಗುಂಪು ಉಪ ಪ್ರಧಾನಿಯವರದ್ದು ಒಂದು ಗುಂಪು. ಆದರಲ್ಲಿರುವ ರಾಜಕೀಯದ ಜೊತೆಗೆ ನಾವೂ ಇಲ್ಲಿ ರಾಜಕೀಯ ಮಾಡುವುದು ಬೇಡ, ಆದರೂ ಸಹಿತ.....

ಅಧ್ಯಕ್ಷರು..—ಆದರೂ ಸಹಿತ ಮಾಡೋಣ ಎಂದು ಹೇಳುತ್ತೀರಾ ?

ಶ್ರೀ ವಾಟಾಳ್ ನಾಗರಾಜ್.—ನಾನು ರಾಜಕೀಯ ಮಾಡುತ್ತಿಲ್ಲ. ನಾನು ರಾಜಕೀಯ ಮಾಡಿ, ಉಪಪ್ರಧಾನಿಯವರು ಏನು ಹೇಳಿದ್ದಾರೆ ಅದನ್ನು ಇಲ್ಲಿ ನಾನು ಚರ್ಚೆ ಮಾಡಿ ಅವರ ನಿಲುವಿಗೆ ಸಪೋರ್ಟ್ ಮಾಡಬೇಕೆಂಬ ಪ್ರಶ್ನೆ ಅಲ್ಲ. ಇಲ್ಲಿರುವುದು ಒಂದೇ ಒಂದು ಪ್ರಶ್ನೆ ಎಂದರೆ ನಮ್ಮ ಮಾಜಿ ಮುಖ್ಯಕಾರ್ಯದರ್ಶಿಯವರು ಆ ಕಮಿಟಿ ಮುಂದೆ ಏನು ಹೇಳಿದ್ದಾರೆ, ಅಷ್ಟಕ್ಕೇ ಸೀಮಿತ ಆಗಬೇಕೆಂಬುದು ನಮ್ಮ ವಿಚಾರ. ಅವರಿಗೂ ರಾಜಕೀಯಕ್ಕೂ ಸಂಬಂಧ ಇಲ್ಲ. ಫೋನನ್ನು ಕದ್ದು ಕೇಳತಕ್ಕದ್ದು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಮಾತ್ರ ನಡೆದಿದೆ ಎಂದು ನಾನು ಒಪ್ಪುವುದಿಲ್ಲ. ಈಗಲೂ ಫೋನ್‌ಟ್ಯಾಪ್ ಇಲಾಖೆಯಲ್ಲಿ ಕದ್ದು ಕೇಳುವ ಪರಿಪಾಠ ಇದೆ. ಅದಕ್ಕೆ ಒಂದು ಇಲಾಖೆಯೇ ಇದೆ. ಈಗಲೂ ಅದು ನಡೆಯುತ್ತಿರಬಹುದು. ಈಗಲೂ ಯಾರದ್ದೋ ಫೋನ್ ಕದ್ದು ಕೇಳುತ್ತಿರಬಹುದು. ಈ ಬಗ್ಗೆ ಹತ್ತು ವರ್ಷದ್ದು ಇಲ್ಲಿ ಸಮಗ್ರವಾಗಿ ಚರ್ಚೆ ಆಗಲಿ. ಫೋನ್ ಕದ್ದು ಕೇಳತಕ್ಕದ್ದು, ರಾಜಕೀಯ ಮಾಡತಕ್ಕದ್ದು ಇದರ ಬಗ್ಗೆ ಇಲ್ಲಿ ಚರ್ಚೆ ನಡೆಯಲಿ ಈ ಬಗ್ಗೆ ಎರಡು ನೋಟೀಸ್‌ಗಳು ಬಂದಿವೆ. ಈ ಸಭೆಯ ಸದಸ್ಯರಾದ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಈ ಸದನದಲ್ಲಿ ಈ ವಿಷಯದ ಮೇಲೆ ಚರ್ಚೆ ನಡೆಯುತ್ತಿದೆ ಎಂಬುದು ಗೊತ್ತಿದೆ. ಅವರು ಒಂದು ದಿವಸ ಈ ಸದನಕ್ಕೆ ಬಂದರೆ ಸಮಸ್ಯೆ ಬಗೆ ಹರಿಯುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಗಮನ ಸೆಳೆಯಂವ ಸೂಚನೆಗಳು

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಕಳುಹಿಸಿರುವ ಗಮನ ಸೆಳೆಯುವ ಸೂಚನೆಯಲ್ಲಿ ಸ್ವಲ್ಪ ಅದಲು ಬದಲು ಆಗಿದೆ. ನಾನು ಕಳುಹಿಸಿರುವ ನೋಟೀಸ್ ಈ ರೀತಿ ಇದೆ. ಸಹಕಾರ ಸಂಘಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳು ಮತ್ತು ಗೊಬ್ಬರದ ವಿತರಣೆ ಸ್ಥಗಿತಗೊಂಡು ರೈತರಿಗೆ ತೊಂದರೆ ಆಗಿ ಸಹಕಾರಿ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳು ಮತ್ತು ಗೊಬ್ಬರದ ವಿತರಣೆ ಸ್ಥಗಿತ ಗೊಂಡಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆಂದು ನೋಟೀಸ್ ಕಳಿಸಿದ್ದೆ.

ಅಧ್ಯಕ್ಷರು.—ಅಜೆಂಡಾದಲ್ಲಿ ಏನಿದೆ ಓದಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಸಹಕಾರ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ಮೂಲಕ ರೈತರಿಗೆ ಗೊಬ್ಬರ ವಿತರಣೆ ಯಾಗದೆ ತೊಂದರೆಯಾಗಿರುವ ಬಗ್ಗೆ ಎಂದು ಇದೆ.

ಅಧ್ಯಕ್ಷರು.—ಒಂದಕ್ಕೊಂದು ಸಂಬಂಧ ಇದೆಯಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಸಂಬಂಧ ಇದೆ. ಆದರೆ ನ್ಯಾಯ ಬೆಲೆ ಅಂಗಡಿಗಳ ಮೂಲಕ ಗೊಬ್ಬರ ವಿತರಣೆ ಆಗುವುದಿಲ್ಲ. ನ್ಯಾಯ ಬೆಲೆ ಅಂಗಡಿಗಳೇ ಬೇರೆ ಸಹಕಾರಿ ಸಂಸ್ಥೆಗಳ ಮೂಲಕ ವಿತರಣೆ ಆಗುವುದೇ ಬೇರೆ. ಅದಕ್ಕೆ ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ತಾವು ಗಮನ ಸೆಳೆಯಿರಿ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಸಹಕಾರ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ಮೂಲಕ ರೈತರಿಗೆ ಗೊಬ್ಬರ ವಿತರಣೆಯಾಗದೇ ತೊಂದರೆಯಾಗಿರುವ ಬಗ್ಗೆ ಮಾನ್ಯ ಸಹಕಾರ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಇಲ್ಲ. ಯಾರು ಇದಕ್ಕೆ ಉತ್ತರ ಕೊಡುವವರು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಸಭಾಧ್ಯಕ್ಷರೇ ಗಮನ ಸೆಳೆಯುವ ಸೂಚನೆಗಳನ್ನು ಬಂದಾಗ ಮಾನ್ಯ ಮಂತ್ರಿಗಳು ಇಲ್ಲದಿದ್ದರೆ ಹೇಗೆ ? ಬಾಕಿ ಸಮಯದಲ್ಲಿ ಆದರೆ ಏನೋ ಪರವಾಗಿಲ್ಲ. ಗಮನ ಸೆಳೆಯುವ ಸೂಚನೆಗಳನ್ನು ಶನಿವಾರವೇ ತಾವು ಅವರಿಗೆ ಕಳುಹಿಸಿರುತ್ತೀರಿ. ಗಂಭೀರವಾದ ವಿಚಾರಗಳು ಇದ್ದರೆ ವಾರ್ತಾ ಗಮನ ಸೆಳೆಯುವ ಸೂಚನೆಗಳಾಗಿ ತಾವು ತಗೆದುಕೊಳ್ಳುತ್ತೀರಿ. ಇಂತಹ ವಿಷಯಗಳು ಬಂದಾಗ ಮಾನ್ಯ ಮಂತ್ರಿಗಳು ಇರಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಯಾವುದೇ ಪ್ರಶ್ನೆ, ಗಮನ ಸೆಳೆಯುವ ಸೂಚನೆ ಯಾವುದೇ ಇರಲಿ ಸಂಬಂಧಪಟ್ಟ ಮಂತ್ರಿಗಳು ಇರಬೇಕಾಗುತ್ತದೆ. ಸಚಿವರ ಹಾಜರಾತಿ ಆಗತ್ಯ. ಅದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ಇರಬೇಕಾದಂತಹ ಸಂದರ್ಭ ಇದ್ದರೂ ಸಹ ಅವರು ಏತಕ್ಕೆ ಸಭೆಯಲ್ಲಿ ಇಲ್ಲವೋ ಎನ್ನುವುದು ನಮಗೆ ತಕ್ಷಣ ಗೊತ್ತಿಲ್ಲ. ಅವರು ಬರತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ, ಈಗ ಇಲ್ಲದೆ ಇರತಕ್ಕಂಥ ತಪ್ಪು ಏನಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಂತ್ರಿಗಳು ಇದ್ದು ಸಮರ್ಪಕವಾದ ಉತ್ತರ ಸದಸ್ಯರಿಗೆ ಕೊಡಬೇಕಾಗುತ್ತದೆ. ಈಗ ತಕ್ಷಣಕ್ಕೆ ಅವರ ಪ್ರಶ್ನೆಯನ್ನು ಮುಂದಕ್ಕೆ ಹಾಕಿ.

SRI K.H. RANGANAH.—Sir, this may please be held over. It seems that a close relative of the concerned Minister has expired.

ಅಧ್ಯಕ್ಷರು.—ಇದನ್ನು ಇನ್ನೊಂದು ದಿವಸ ನಾನು ತೆಗೆದುಕೊಳ್ಳುತ್ತೇನೆ. ಆನಿವಾರ್ಯ ಕಾರಣಗಳು ಇದ್ದರೆ ನನಗೆ ತಿಳಿಸಿದರೆ ಆಗ ಇತಹ ತಪ್ಪು ಅಭಿಪ್ರಾಯಗಳು ಬರುವುದಕ್ಕೆ ಅವಕಾಶ ಇಲ್ಲದಂತೆ ಆಗುತ್ತದೆ. The Government should take notice of it. ಅಂತಹ ವೈಯುಕ್ತಿಕ ತೊಂದರೆಗಳು ಇದ್ದರೆ ನನಗೆ ತಿಳಿಸಬಹುದು. ಆಗ ನಾವು ಬೇರೆ ಏರ್ಪಾಡು ಮಾಡಿಕೊಳ್ಳಬಹುದು. They should atleast inform me. They cannot spring a surprise on me like this. I am very unhappy about this. ಮನೆಗಳಲ್ಲಿ ಮತ್ತು ಆಫೀಸ್ ಗಳಲ್ಲಿ ಟೆಲಿಫೋನ್ಸ್ ಇದೆ. ಆದ್ದರಿಂದ ಟೆಲಿಫೋನ್ ಮಾಡಿ ನನಗೆ ತಿಳಿಸುಬಹುದಿತ್ತು. Anyway, it is held over. ಅದು ಏನೇ ಇರಲಿ, ಇದನ್ನು ಇನ್ನೊಂದು ದಿವರ ತೆಗೆದುಕೊಳ್ಳುತ್ತೇನೆ. ಮುಂದಿನ ಗಮನ ಸೆಳೆಯುವ ಸೂಚನೆ ಶ್ರೀ ಇದಿನಬ್ಬ ಅವರದ್ದು.

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಎನ್.ಎಸ್ ಇಂಡಸಗೇರಿ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಕೋಮುವಾರು ಗಲಭೆಗಳು ನಡೆಯುತ್ತಿವೆ.....

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರಾ ?

ಶ್ರೀ ಎನ್.ಎಸ್. ಹಿಂಡಸಗೇರಿ.—ಇಲ್ಲ.

ಅಧ್ಯಕ್ಷರು.—ನೋಟೀಸ್ ಕೊಡಿ. ಆದನ್ನ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ ಒಂದು ಗಂಭೀರವಾದ ಪ್ರಶ್ನೆ ಏನೆಂದರೆ, ಗೋಪಿನಾಥಂ ಬಳಿ ವೀರಪ್ಪನ್ ಕಡೆಯವರು ನಮ್ಮ ರೈತರನ್ನು ಹೊಡೆದು ಹಾಕಿದ್ದಾರೆ. ನಮ್ಮ ವೀಸಲು ಪೋಲೀಸಿನವರು ಎಲ್ಲಿ ಟೆಂಟ್ ಹಾಕಿಕೊಂಡಿದ್ದಾರೆ, ಅದಕ್ಕೆ ೫೦೦ ಗಜ ದೂರದಲ್ಲಿ ಒಬ್ಬ ರೈತನನ್ನು ವೀರಪ್ಪನ್ ಕಡೆಯವರು ಗುಂಡಿಟ್ಟು ಕೊಂದಿದ್ದಾರೆ. ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಬದಲು ನಮ್ಮ ರೈತರೇ ಸಾಯುತ್ತಿದ್ದಾರೆ. ನಾನು ನಿನ್ನೆ ಮೈಸೂರಿಗೆ ಹೋಗಿದ್ದಾಗ ನೋಡಿಕೊಂಡು ಬಂದಿದ್ದೇನೆ, ಪರಿಸ್ಥಿತಿ ಬಹಳ ಗಂಭೀರವಾಗಿದೆ.....

ಅಧ್ಯಕ್ಷರು.— ತಾವು ನೋಟೀಸ್ ಬರೆದು ಕೊಡಿ.

ಶ್ರೀ ವಾಟಾಳ್ ನಾಗರಾಜ್.— ಸ್ವಾಮಿ ಇಷ್ಟು ಪ್ರಮುಖವಾದ ವಿಷಯ ಇದೆ. ತಾವು ನೋಟೀಸ್ ಕೊಟ್ಟು ಮಾತನಾಡು ಎಂದರೆ ಹೇಗೆ.....

ಅಧ್ಯಕ್ಷರು.— ತಾವು ನೋಟೀಸ್ ಕೊಡಿ.

ಶ್ರೀ ವಾಟಾಳ್ ನಾಗರಾಜ್. — ಪೋಲೀಸ್‌ನವರು ವೀರಪ್ಪನ್‌ನ್ನು ಹಿಡಿಯಲು ಹೋಗಿದ್ದರಿಂದ ಅವನ ಕಡೆಯವರು ಇವತ್ತು ನಮ್ಮ ರೈತನನ್ನು ಗುಂಡಿಟ್ಟು ಕೊಂದಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ಮಾಹಿತಿ ಇದ್ದರೆ ಹೇಳಲಿ. ಆ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಈ ಸಭೆಗೆ ತಿಳಿಸಲಿ.

ಅಧ್ಯಕ್ಷರು. — ಮೊದಲು ನೀವು ನೋಟೀಸ್ ಕೊಡಿ.

ಶ್ರೀ ವಾಟಾಳ್ ನಾಗರಾಜ್. — ನಾವು ನಿಮ್ಮ ಹತ್ತಿರ ಮಾತನಾಡಲು ನಿಮ್ಮ ಕೊಠಡಿ ಬಾಗಲಿಗೆ ಬಂದಾಗ ಯಾರೋ ಇಬ್ಬರು ನಮ್ಮನ್ನು ಹಿಡಿದುಕೊಂಡು ನಮ್ಮ ಕತ್ತನ್ನು ಹಿಸುಕಿಬಿಟ್ಟಾಗ, ಅದನ್ನು ಪ್ರಸ್ತಾಪ ಮಾಡಲು ಸಹ ನೋಟೀಸ್ ಕೊಡಿ ಎಂದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು. — ಆ ರೀತಿ ಮಾಡಿದಾಗ ಇಲ್ಲಿ ಎದ್ದು ನಿಂತು ಹೇಳಿ. ಆದರೆ ಈ ವಿಚಾರದಲ್ಲಿ ಮಾತ್ರ ನೋಟೀಸ್ ಕೊಡಿ. ಈಗ ಮಾನ್ಯ ಕಾಜಲಗಿ ಅವರು ನಿಯಮ ೩೫೪ರ ಮೇರೆಗೆ ವಿಷಯ ಪ್ರಸ್ತಾಪ ಮಾಡಬಹುದು.

೧೨-೩೦ ಪಿ. ಎಂ.

ನಿಯಮ ೩೫೪ರ ಮೇರೆಗೆ

೧) ಬೈಲಹೊಂಗಲದಿಂದ ನಗರಕ್ಕೆ ಸುವಿಹಾರಿ ಬಸ್ಸನ್ನು ಪ್ರಾರಂಭಿಸಲು ಒತ್ತಾಯ

ಶ್ರೀ ಶಿವಾನಂದ ಎಚ್. ಕೌಜಲಗಿ. — ಅಧ್ಯಕ್ಷರೇ, ಬೈಲಹೊಂಗಲ ನಗರವು ಬಹು ದೊಡ್ಡ ವ್ಯಾಪಾರಿ ಕೇಂದ್ರವಾಗಿದ್ದು ಪ್ರತಿ ದಿನ ಬೈಲಹೊಂಗಲ ನಗರದಿಂದ ಬೆಂಗಳೂರಿಗೆ ವ್ಯಾಪಾರಸ್ಥರು ವಕೀಲರು ಬೆಂಗಳೂರು ನಗರಕ್ಕೆ ಬರುತ್ತಾರೆ. ಆದಕಾರಣ ಪ್ರತಿ ದಿನ ಸಂಜೆಗೆ ಬೈಲಹೊಂಗಲದಿಂದ ಬೆಂಗಳೂರಿಗೆ ಸುವಿಹಾರಿ ಬಸ್ಸನ್ನು ಮತ್ತು ಬೆಂಗಳೂರಿನಿಂದ ಬೈಲಹೊಂಗಲಕ್ಕೆ ಸುವಿಹಾರಿ ಬಸ್ಸನ್ನು ಕೂಡಲೇ ಪ್ರಾರಂಭಿಸಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು). — ಅಧ್ಯಕ್ಷರೇ, ಬೆಂಗಳೂರಿನಿಂದ ಬೈಲಹೊಂಗಲಕ್ಕೆ ಸುವಿಹಾರಿ ಬಸ್ಸನ್ನು ಪ್ರಾರಂಭಿಸಲು ಈಗಾಗಲೇ ತೀರ್ಮಾನಿಸಲಾಗಿದೆ. ಈಗ ಪಳೆಗಾಲ ಪ್ರಾರಂಭವಾಗಿರುವುದರಿಂದ ಕೈಗೊಂಡ ತೀರ್ಮಾನದಂತೆ ಪಳೆಗಾಲ ಮುಗಿದ ಮೇಲೆ ಬೆಂಗಳೂರು ಬೈಲಹೊಂಗಲದ ಮಧ್ಯ ಸುವಿಹಾರಿ ಬಸ್ ಸೇವೆಯನ್ನು ಪ್ರಾರಂಭಿಸಲಾಗುವುದು.

೨) ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಬಗ್ಗೆ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ). — ಅಧ್ಯಕ್ಷರೇ, ರಾಜ್ಯದಲ್ಲಿರುವ ಲಂಬಾಣಿ ತಾಂಡಗಳನ್ನು ರೆವಿನ್ಯೂ ಗ್ರಾಮಗಳಾಗಿ ಪರಿವರ್ತನೆ ಮಾಡಬೇಕೆಂದು ಬಹಳಷ್ಟು ವರ್ಷಗಳಿಂದ ಈ ಜನಾಂಗದವರು ಸರ್ಕಾರದ ಮುಂದೆ ಬೇಡಿಕೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಯವರು ಸಹ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಹಿಂದೆ ಇದು ಈ ಸದನದಲ್ಲಿ ಸಹ ಚರ್ಚೆ ಆಗಿದೆ, ಇಲ್ಲಿಯವರೆಗೂ ಅವರ ಬೇಡಿಕೆಯನ್ನು ಸರ್ಕಾರ ಪೂರೈಸಿಲ್ಲ. ಅವು ರೆವಿನ್ಯೂ ಗ್ರಾಮಗಳಾದರೆ ಸರ್ಕಾರದಿಂದ ಬರತಕ್ಕ ನೇರವಾದ ಸೌಲಭ್ಯಗಳೆಲ್ಲಾ ಸಿಗುತ್ತವೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ನಿಖರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು). — ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಒಂದು ನೂರು ಅಥವಾ ಅದಕ್ಕಿಂತ ಹೆಚ್ಚು ಕುಟುಂಬಗಳಿರುವ ಅಥವಾ ಐದು ನೂರು ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ ಮಧ್ಯೆ, ಕೇಂದ್ರ ಸರ್ಕಾರವು ೧೯೯೧ರ ಜನಗಣತಿ ಕಾರ್ಯವು ಸಂಪೂರ್ಣಗೊಳ್ಳುವವರೆಗೆ ಅಂದರೆ ೩೦.೬.೧೯೯೧ರವರೆಗೆ ಯಾವುದೇ ಜಿಲ್ಲೆ: ತಾಲ್ಲೂಕು: ಗ್ರಾಮಗಳ ಸರಹದ್ದನ್ನು ಬದಲಾಯಿಸಬಾರದೆಂದು ಸೂಚನೆ ನೀಡಿರುತ್ತದೆ. ಈ ಕಾರಣದಿಂದ ಲಂಬಾಣಿ ತಾಂಡಾಗಳನ್ನು ಕಂದಾಯ